**ದಿನಾಂಕಃ 11-08-2023 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಆರ್ ವಿ ಆರ್ ವಕೀಲರಿಂದಃ**

3. ನಾನು ಈಗ ಎದುರುದಾರರ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿಲ್ಲ ಎಂದರೆ ಹೌದು . ನಾನು 2013 ಆಗಸ್ಟ್ ತಿಂಗಳಿನಿಂದ 15.08.2017 ರವರೆಗೆ ಎದುರುದಾರ ಸಂಸ್ಥೆಯಲ್ಲಿ ಎಚ್ ಆರ್ ಆಫೀಸರ್ ಆಗಿ ಕೆಲಸ ಮಾಡುತ್ತಿದ್ದೆ. ನಾನು ಮಾನವ ಸಂಪನ್ಮೂಲ ಅಧಿಕಾರಿಯಾಗಿ ಕಾರ್ಮಿಕರ ಮತ್ತು ಆಡಳಿತ ಮಂಡಳಿಯ ನಡುವೆ ಎದುರುದಾರ ಸಂಸ್ಥೆಯಲ್ಲಿ ಭಿನ್ನಾಭಿಪ್ರಾಯ ಬಂದರೆ ಅದನ್ನು ಬಗೆಹರಿಸುವ ಅಧಿಕಾರ ಇತ್ತು ಎಂದರೆ ಹೌದು . ಅರ್ಜಿದಾರ ನನಗೆ ಜೀವ ಬೆದರಿಕೆ ಹಾಕಿದ ಬಗ್ಗೆ ನಾನು ಪೊಲೀಸ್ ನವರಿಗೆ ದೂರು ಕೊಟ್ಟಿಲ್ಲ. ಸಂತೋಷ ದೇವಾಡಿಗ ಮತ್ತು ಕರಿಬಸಪ್ಪರವರಿಗೆ ಅರ್ಜಿದಾರ ಜೀವ ಬೆದರಿಕೆ ಹಾಕಿದ ಬಗ್ಗೆ ಪೊಲೀಸ್ ನವರಿಗೆ ದೂರನ್ನು ಕೊಟ್ಟಿಲ್ಲ. ದಿನಾಂಕ 11.09.2015 ರಂದು ಅರ್ಜಿದಾರ ಎದುರುದಾರ ಕಂಪನಿಯಲ್ಲಿ ಕೆಲಸ ಮಾಡಿದ್ದಾನೆ ಎಂದರೆ ಹೌದು . ಅರ್ಜಿದಾರನಿಗೆ ದಿನಾಂಕ 11.09.2015 ರಂದು ನಾವು ನಡೆಸಿದ ಸಭೆಗೆ ಹಾಜರಾಗುವಂತೆ ಲಿಖಿತ ನೋಟಿಸನ್ನು ಕೊಟ್ಟಿಲ್ಲ ಮೌಖಿಕವಾಗಿ ಅರ್ಜಿದಾರನಿಗೆ ಹಾಜರಾಗಲು ತಿಳಿಸಲಾಗಿತ್ತು . ಆ ದಿನ ಅರ್ಜಿದಾರ 2 ನೇ ಪಾಳಿಯಲ್ಲಿ ಕೆಲಸ ಮಾಡಿಕೊಂಡು ಹೋಗಿದ್ದಾನೆ ಎಂದರೆ ಹೌದು ಆದರೆ 2 ನೇ ಪಾಳಿ ನಂತರ 3 ನೇ ಪಾಳಿಯಲ್ಲಿ ಆ ದಿನ ಅರ್ಜಿದಾರ ಹೆಚ್ಚುವರಿ ಸಮಯದಲ್ಲಿ ( over time) ಕೆಲಸ ಮಾಡುತ್ತಿದ್ದ ಆಗ ಅವನು ಕೆಲಸ ಮಾಡದೇ ಮಲಗಿಕೊಂಡಿದ್ದ . ದಿನಾಂಕ 10.09.2015 ರಂದು ಅರ್ಜಿದಾರ 2 ನೇ ಪಾಳಿಗೆ ಮಧ್ಯಾಹ್ನ 4.00 ಗಂಟೆಗೆ ಕೆಲಸಕ್ಕೆ ವರದಿ ಮಾಡಿಕೊಂಡಿದ್ದ. 2 ನೇ ಪಾಳಿ ಆ ದಿನ ರಾತ್ರಿ 12.30 ಗಂಟೆಗೆ ಮುಗಿದಿರುತ್ತದೆ . ಆ ನಂತರ ಅಂದರೆ 11.09.2015 ರಂದು ಬೆಳಿಗ್ಗ 3 ನೇ ಪಾಳಿಗೆ ಬೆಳಿಗ್ಗ 00.30 ಗಂಟೆಗೆ ಅರ್ಜಿದಾರ ಅಧಿಕ ಕರ್ತವ್ಯದಲ್ಲಿ ಮುಂದುವರಿದಿದ್ದ. ಎದುರುದಾರ ಸಂಸ್ಥೆ ಒಂದೊಂದು ಪಾಳಿಯಲ್ಲಿ ನೌಕರ ಎಷ್ಟು ಕೆಲಸ ಮಾಡಬೇಕು ಎಂದು ಗುರಿಯನ್ನು ಇಟ್ಟಿರುತ್ತದೆ ಎಂದರೆ ಹೌದು . ದಿನಾಂಕ 11.09.2015 ರಂದು ಅರ್ಜಿದಾರ ಸಂಜೆ 4.00 ಗಂಟೆಗೆ ಕರ್ತವ್ಯಕ್ಕೆ ಹಾಜರಾಗಿದ್ದಾನೆ ಎಂದರೆ ಸರಿಯಲ್ಲ. ನಾವು 11.09.2015 ರಂದು ಸಂಜೆ 4.00 ಗಂಟೆಗೆ ಅರ್ಜಿದಾರನಿಗೆ ಸಭೆಗೆ ಹಾಜರಾಗಲು ಮೌಖಿಕವಾಗಿ ಕರೆದಿದ್ದೆವು . ಆಗ ಅರ್ಜಿದಾರ ಸಭೆಗೆ ಹಾಜರಾದ ಆದರೆ ಸಹಕರಿಸಲಿಲ್ಲ.

(ಮುಂದುವರಿದ ಪಾಟೀ ಸವಾಲನ್ನು ಮುಂದಿನ ದಿನಾಂಕದವರೆಗೆ ಮುಂದೂಡಲಾಗಿದೆ ).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ.